**ಮೂ.ದಾ.ನಂ. 68/2014**

ಪಿ.ಡಬ್ಲ್ಯು 1

(ಇಂದು ದಿನಾಂಕ: **15-09-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಶ್ರೀ.ವಾಯ್.ವಿ.ಎಸ್. ವಕೀಲರಿಂದಃ**

ಕುಮಟಾ ತಾಲೂಕು ಹಳೇಹೆರವಟ್ಟಾ ಗ್ರಾಮದ ಸರ್ವೆ ನಂಬರ 43 ಹಿಸ್ಸಾ 3 ಬ ದ ಒಟ್ಟೂ ಕ್ಷೇತ್ರ 2 ಗುಂಟೆ ಖರಾಬ 4 ಆಣೆ ಎಂದರೆ ಸರಿ. ಅನಂತ ಗಣಪಯ್ಯ ಶಾನಭಾಗ ಎಂದರೆ ನನ್ನ ಅಜ್ಜ. ಗಣಪಯ್ಯ ಅನಂತ ಶಾನಭಾಗ ಎಂದರೆ ನನ್ನ ಹಿರಿಯ ಮಾವನಾಗಿರುತ್ತಾರೆ. ಸರ್ವೆ ನಂಬರ 43 ಹಿಸ್ಸಾ 3 ಬ ವು ರೈತ ಹಕ್ಕಿನ ಆಸ್ತಿ ಎಂದೆರ ಸರಿ. ಗಣಪಯ್ಯ ಅನಂತ ಶಾನಭಾಗ ಇವರಿಗೆ ಅ ಕು ಮೇ ನಾತೆಯಿಂದ 6/7 ಹಕ್ಕು ಎಂದರೆ ಸರಿ. ಉಳಿದ 1/7 ಹಕ್ಕು ಮುಕುಂದ ಬಾಬು ಪೈ ಇವರಿಗೆ ಸಂಬಂದಿಸಿದ್ದು ಎಂದರೆ ಸರಿ.

ಕರ್ನಾಟಕ ಭೂ ಸುಧಾರಣೆ ಕಾಯ್ದೆ ಬಂದ ನಂತರದಲ್ಲಿ ಇಬ್ಬರೂ ಸಹ ಸದ್ರಿ ಜಾಗವನ್ನು ಅನುಭೋಗದಾರಿಕೆಗಾಗಿ ನಮೂನೆ ನಂ. 7 ನ್ನು ತುಂಬಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದ್ರಿ ಸಂದರ್ಬದಲ್ಲಿ ನನ್ನ ಅಜ್ಜನಾದ ಅನಂತ ಗಣಪಯ್ಯ ಶಾನಭಾಗ ಇವರು ಜೀವಿತ ಇದ್ದರು ಎಂದರೆ ಸರಿ. ಸದ್ರಿಯವರೇ ನಮೂನೆ ನಂಬರ 7 ನ್ನು ತುಂಬಿರುತ್ತಾರೆ ಎಂದರೆ ಸರಿ. ಸದ್ರಿಯವರಿಗೆ ಕುಮಟಾ ಭೂ ನ್ಯಾಯ ಮಂಡಳಿಯು 6/7 ಹಕ್ಕನ್ನು ಅನಂತ ಗಣಪಯ್ಯ ಶಾನಭಾಗ ಇವರಿಗೆ ಮಂಜೂರಾಗಿದೆ ಎಂದರೆ ಸರಿ. ಅದರಂತೆ ಉಳಿದ 1/7 ಹಕ್ಕು ಮುಕುಂದ ಬಾಬು ಪೈ ಇವರಿಗೆ ಬಂದಿದೆ ಎಂದರೆ ಸರಿ. ಮುಕುಂದ ಬಾಬು ಪೈ ಇವರು 1/7 ಹಕ್ಕು ಹಾಗೂ ಅನಂತ ಗಣಪಯ್ಯ ಶಾನಭಾಗ ಇವರ 6/7 ಹಕ್ಕು ಅವರ ಮರಣಾನಂತರ ವಿಂಗಡಣೆ ಆಗಲಿಲ್ಲ ಎಂದರೆ ಸರಿ. ಸರ್ವೆ ನಂಬರ

**ಮೂ.ದಾ.ನಂ. 68/2014**

ಪಿ.ಡಬ್ಲ್ಯು.1

43 ಹಿಸ್ಸಾ 3 ಬ ದಲ್ಲಿ ನನ್ನ ಅಜ್ಜನಾದ ಅನಂತ ಗಣಪಯ್ಯ ಶಾನಭಾಗ ಇವರ ವಾಸ್ತವ್ಯದ ಮನೆ ಇದೆ ಎಂದರೆ ಸರಿ.

ಕುಮಟಾ ತಾಲೂಕು ಹೊಸಹೆರವಟ್ಟಾ ಗ್ರಾಮದ ಸರ್ವೆ ನಂಬರ 118 ಹಿಸ್ಸಾ 3+4 ಜಾಗವು ಖುಷ್ಕಿ ಜಾಗ ಎಂದೆ ಸರಿ. ಅದರಲ್ಲಿ ಗಣಪಯ್ಯ ಅನಂತ ಶಾನಭಾಗ ಹಾಗೂ ರಾಮನಾಥ ಬಾಳನಾಥ ಶಾನಭಾಗ ಇವರಿಗೆ ತಲಾ ½ ಅಂಶ ಹಕ್ಕು ಎಂದರೆ ಸಾಕ್ಷಿಯು ಅ ಕು ಮೆ ನಾತೆಯಿಂದ ಹಕ್ಕು ಇದೆ ಎಂದು ನುಡಿಯುತ್ತಾರೆ. ಸದ್ರಿ ಜಮೀನಿನಲ್ಲಿ ಸಾಗುವಳಿ ಮಾಡಲು ಸಾಧ್ಯ ಇಲ್ಲ ಹಾಗೂ ಯಾವುದೇ ಉತ್ಪನ್ನ ಇಲ್ಲ ಎಂದರೆ ಸರಿ.

ಕುಮಟಾ ತಾಲೂಕು ಕಲಭಾಗ ಗ್ರಾಮದ ಸರ್ವೆ ನಂಬರ 179 ಹಿಸ್ಸಾ 1, 180 ಹಿಸ್ಸಾ 1 ಹಾಗೂ 221 ಹಿಸ್ಸಾ 5 ಅ ಜಾಗವು ಖುಷ್ಕಿ ಜಾಗ ಎಂದರೆ ಸರಿ. ಅನಂತ ಗಣಪಯ್ಯ ಶಾನಭಾಗ ಇವರು ಅವರ ಕಾಲದಲ್ಲಿ ಪಾಲು ನಾತೆಗೆ ಸಾಗುವಳಿಗೆ ನೀಡಿದ್ದರು ಎಂದರೆ ಸರಿ. ನಂತರದಲ್ಲಿ ಸದ್ರಿ ಜಮೀನನ್ನು ಯಾರೂ ಸಾಗುವಳಿ ಮಾಡುತ್ತಿರಲಿಲ್ಲ ಎಂದರೆ ಸರಿ. ಈ ಮೂರು ಸರ್ವೆ ನಂಬರಗಳಲ್ಲಿ ಅನಂತ ಗಣಪಯ್ಯ ಶಾನಭಾಗ ಇವರು ಮೃತರಾದರೂ ಸಹ ಅವರ ಹೆಸರೇ ಮುಂದುವರಿದಿದೆ ಎಂದರೆ ಸರಿ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ